# 13-01-2025


ವಿದ್ಯಾವರ್ಧಕ ಸಂಘ(ರಿ), ಮೈಸೂರು
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
ಶೇಷಾದ್ರಿ ಐಯ್ಯರ್ ರಸ್ತೆ, ಮೈಸೂರು
ರಾಷ್ಟ್ರೀಯ ಸೇವಾ ಯೋಜನಾ ಘಟಕ, ಎನ್.ಸಿ.ಸಿ, ದಿ ಭಾರತ್‌ಸ್ಕೌಟ್ಸ್ ಮತ್ತು ಗೈಡ್ಸ್
ಯೂತ್ ರೆಡ್ ಕ್ರಾಸ್, ಕ್ರೀಡಾ ವಿಭಾಗ ಹಾಗೂ ಐಕ್ಯೂಎಸಿ ಘಟಕಗಳ ವತಿಯಿಂದ
ರಾಷ್ಟ್ರೀಯ ಯುವ ದಿನಾಚರಣೆ
ಸ್ವಾಮಿ ವಿವೇಕಾನಂದರ 162 ನೇ ಜಯಂತೋತ್ಸವ
ಪ್ರಧಾನ ಭಾಷಣ
ಮಹೇಶ್.ಡಿ
ಹಿರಿಯ ಉಪನ್ಯಾಸಕರು
ಇತಿಹಾಸ ವಿಭಾಗ
ವಿ.ವ.ಪ.ಪೂ.ಕಾಲೇಜು, ಮೈಸೂರು
ಅಧ್ಯಕ್ಷತೆ
ಡಾ.ಎಸ್.ಮರೀಗೌಡ
ಪ್ರಾಂಶುಪಾಲರು
ವಿ.ವ.ಪ್ರ.ದ. ಕಾಲೇಜು, ಮೈಸೂರು
ಉಪಸ್ಥಿತಿ
ಡಾ.ಪಿ.ಕೆ.ಗೋವರ್ಧನ್
ಅಧ್ಯಾಪಕ ಸಲಹೆಗಾರರು
ವಿ.ವ.ಪ್ರ.ದ. ಕಾಲೇಜು, ಮೈಸೂರು.
ಪ್ರೊ.ಸಿದ್ದರಾಜು.ಎಸ್
ರಾ.ಸೇ.ಯೋ ಕಾರ್ಯಕ್ರಮಾಧಿಕಾರಿ
ವಿ.ವ.ಪ್ರ.ದ. ಕಾಲೇಜು, ಮೈಸೂರು.
ದಿನಾಂಕ:13.01.2025 ಸಮಯ: 11.30 ಗಂಟೆ ಸ್ಥಳ: ಶ್ರೀ.ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ
ಎಲ್ಲರಿಗೂ ಆತ್ಮೀಯ ಸ್ವಾಗತ



**"ನೀ ಕೆತ್ತಿದ ಕರ್ಮದ ಲಿಖಿತ, ನೀನಿತ್ತ ಧೀಕ್ಷೆ ಬದುಕಿಗೆ ಕೈ ದೀವಿಗೆಯಾಗಿದೆ"**

- ಶ್ರೀ.ಮಹೇಶ್.ಡಿ

ಇಂದು ನಾವು ವಿವೇಕಾನಂದರನ್ನು ಸ್ಮರಿಸಿಕೊಳ್ಳಲು ಮುಖ್ಯ ಕಾರಣ ಅವರ ವ್ಯಕ್ತಿತ್ವ ಮತ್ತು ವಿಚಾರ ಧಾರೆಗಳೇ ಆಗಿದೆ. ವಿವೇಕಾನಂದರನ್ನು ಮಾದರಿಯಾಗಿ ತೆಗೆದುಕೊಂಡರೆ ಇಂದಿನ ಯುವಕರು ಏನೆಲ್ಲವನ್ನು ಕೂಡ ಸಾಧಿಸಬಹುದು ಎಂಬುದಕ್ಕೆ ಪ್ರೇರಣೆಯಾಗಿದ್ದಾರೆ ಎಂದು ವಿದ್ಯಾವರ್ಧಕ ಪದವಿ ಪೂರ್ವ ಕಾಲೇಜಿನ ಇತಿಹಾಸ ವಿಭಾಗದ ಹಿರಿಯ ಉಪನ್ಯಾಸಕರಾದ ಶ್ರೀ.ಮಹೇಶ್.ಡಿ ಅವರು ಅಭಿಪ್ರಾಯಪಟ್ಟರು.

ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ದಿನಾಂಕ:13.01.2025ನೇ ಸೋಮವಾರದಂದು ಐಕ್ಯೂಎಸಿ ಘಟಕ, ರಾಷ್ಟ್ರೀಯ ಸೇವಾ ಯೋಜನಾ ಘಟಕ, ರಾಷ್ಟ್ರೀಯ ಸೇವಾದಳ, ದಿ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್, ಭಾರತೀಯ ಯೂತ್ ರೆಡ್ ಕ್ರಾಸ್, ಕ್ರೀಡಾ ವಿಭಾಗ, ನೇಚರ್ ಕ್ಲಬ್ ಘಟಕಗಳ ವತಿಯಿಂದ "ರಾಷ್ಟ್ರೀಯ ಯುವ ದಿನಾಚರಣೆ ಮತ್ತು ಸ್ವಾಮಿ ವಿವೇಕಾನಂದರ 162ನೇ ಜಯಂತೋತ್ಸವ" ಕಾರ್ಯಕ್ರಮದಲ್ಲಿ ಪ್ರಧಾನ ಭಾಷಣಕಾರರಾಗಿ ಆಗಮಿಸಿ ಅವರು ಮಾತನಾಡುತ್ತಿದ್ದರು. ದೇವರು ಮತ್ತು ಸಂಸ್ಕೃತಿಯ ಬಗ್ಗೆ ಅಗಾಧವಾಗಿ ತಿಳಿದುಕೊಳ್ಳುವ ಆಸಕ್ತಿಯನ್ನು ಹೊಂದಿದ್ದ ವಿವೇಕಾನಂದರು ಸದಾ ಅದರ ಹುಡುಕಾಟದಲ್ಲೇ ತೊಡಗಿದ್ದರು. ವಿವೇಕಾನಂದರ ಕುಟುಂಬದಲ್ಲಿ ಅವರ ತಾತನವರೂ ಕೂಡ ಸನ್ಯಾಸವನ್ನು ಸ್ವೀಕರಿಸಿದ್ದರು ಅದೂ ಕೂಡ' ವಿವೇಕಾನಂದರ ಮೇಲೆ ಅಗಾಧವಾದ ಪ್ರೇರಣೆ ಮತ್ತು ಪ್ರಭಾವವನ್ನು ಬೀರಿತ್ತು.

ಧರ್ಮ ವಿಜ್ಞಾನಕ್ಕಿಂತ ಮಿಗಿಲಾದುದು ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು. ದೇವರ ಅಸ್ತಿತ್ವದ ಬಗ್ಗೆ ಅವರ ಪ್ರಶ್ನೆಗಳಿಗೆ ಶ್ರೀರಾಮಕೃಷ್ಣ ಪರಮಹಂಸರಲ್ಲಿ ಉತ್ತರ ದೊರಕಿತ್ತು. ವಿವೇಕಾನಂದರನ್ನು ರಾಮಕೃಷ್ಣ ಪರಮಹಂಸರು ನೀನು ಏನನ್ನು ಸಾಧಿಸಲು ಬಂದಿರುವೆ ಅದನ್ನು ಸಾಧಿಸುವವರೆಗೂ ನೀನು ಇಲ್ಲಿಯೇ ಇರಬೇಕು ಎಂದು ಹೇಳಿದ್ದರಂತೆ. ನಂತರ ಭಾರತದಾದ್ಯಂತ ಪರ್ಯಟನೆ ಮಾಡಿದ ವಿವೇಕಾನಂದರು ಅಗಾಧ ಜ್ಞಾನವನ್ನು ಪಡೆದುಕೊಂಡರು. ಭಾರತದ ಪ್ರತಿನಿಧಿಯಾಗಿ ಅಮೇರಿಕಾದ ಚಿಕಾಗೋ ನಗರಕ್ಕೆ ಬಂದಿಳಿದ ವಿವೇಕಾನಂದರು ಹಲವು ಕಷ್ಟಗಳನ್ನು ಎದುರಿಸಬೇಕಾಯಿತು. ಹಲವರ ಸಹಾಯದಿಂದ ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿ ಭಾರತದ ಸಂಸ್ಕೃತಿಯ ಕೀರ್ತಿ ಪತಾಕೆಯನ್ನು ಎಲ್ಲರಿಗೂ ಅರಿಯುವಂತೆ ಮಾಡಿದರು. ವಿವೇಕಾನಂದರು ವೇದಾಂತ ಸಮಾಜವನ್ನು ನಿರ್ಮಾಣ ಮಾಡಿದ್ದರು. ಅದು ಇಂದೂ ಕೂಡ ವಿದೇಶಗಳಲ್ಲಿ ಕಾರ್ಯಪ್ರವೃತ್ತವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡ ಅಧ್ಯಕ್ಷೀಯ ನುಡಿಗಳನ್ನಾಡಿದರು. ರಾ.ಸೇ.ಯೋ ಕಾರ್ಯಕ್ರಮಾಧಿಕಾರಿಯಾದ ಸಿದ್ಧರಾಜು.ಎಸ್ ಎಲ್ಲರನ್ನೂ ಸ್ವಾಗತಿಸಿದರು. ರಾ.ಸೇ.ಯೋ. ಸ್ವಯಂ ಸೇವಕರು, ಅಧ್ಯಾಪಕರು, ಅಧ್ಯಾಪಕೇತರರು ಭಾಗವಹಿಸಿದ್ದ ಕಾರ್ಯಕ್ರಮವನ್ನು ಅಧ್ಯಾಪಕ ಸಲಹೆಗಾರರಾದ ಡಾ.ಪಿ.ಕೆ.ಗೋವರ್ಧನ್ ವಂದಿಸಿ, ಸಹಾಯಕ ಪ್ರಾಧ್ಯಾಪಕರಾದ ಶಶಿಧರ್.ಎಸ್. ನಿರೂಪಿಸಿದರು.










ರಾಷ್ಟ್ರೀಯ ಸೇವಾ ಯೋಜನಾ ಘಟಕ, ಎನ್.ಸಿ.ಸಿ, ದಿ ಭಾರತ್‌ಸ್ಕೌಟ್ಸ್ ಮತ್ತು ಗೈಡ್ಸ್
ಯೂತ್ ರೆಡ್ ಕ್ರಾಸ್, ಕ್ರೀಡಾ ವಿಭಾಗ ಹಾಗೂ ಐಕ್ಯೂಎಸಿ ಘಟಕಗಳ ವತಿಯಿಂದ
ರಾಷ್ಟ್ರೀಯ ಯುವ ದಿನಾಚರಣೆ
ಸ್ವಾಮಿ ವಿವೇಕಾನಂದರ 162 ನೇ ಜಯಂತೋತ್ಸವ
ಪ್ರಧಾನ ಭಾಷಣ : ಮಹೇಶ್.ಡಿ
ಡಾ.ಎಸ್.ಮರೀಗೌಡ






















ರಾಷ್ಟ್ರೀಯ ಸೇವಾ ಯೋಜನಾ ಘಟಕ, ಎನ್.ಸಿ.ಸಿ, ದಿ ಭಾರತ್‌ಸ್ಕೌಟ್ಸ್ ಮತ್ತು ಗೈಡ್ಸ್
ಯೂತ್ ರೆಡ್ ಕ್ರಾಸ್, ಕ್ರೀಡಾ ವಿಭಾಗ ಹಾಗೂ ಐಕ್ಯೂಎಸಿ ಘಟಕಗಳ ವತಿಯಿಂದ
ರಾಷ್ಟ್ರೀಯ ಯುವ ದಿನಾಚರಣೆ

